ರೈತರಿಗೆ ರಸಗೊಬ್ಬರಗಳನ್ನು ಸಮರ್ಪಕವಾಗಿ ವಿತರಣೆ ಮಾಡಿಲ್ಲವೆಂಬುದಾಗಿ ದೂರುಗಳು ಬಂದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ.

ಆ) ಮೇಲ್ಕಂಡ ಎರಡು ಸಹಕಾರ ಸಂಘಗಳ ಪೈಕಿ ಒಂದು ಸಂಘದ ಪ್ರಕರಣದಲ್ಲಿ ವಿಚಾರಣೆ ನಡೆದಿದ್ದು, ವಿವರವಾದ ವಿಚಾರಣೆ ನಡೆದಿಲ್ಲ. ವಿವರವಾದ ವಿಚಾರಣೆ ನಡೆಸಿ ವರದಿ ತರಿಸಿಕೊಳ್ಳಲಾಗುವುದು. ಇನ್ನೊಂದು ಸಂಘದ ಬಗ್ಗೆ ದೂರು ಇತ್ತೀಚೆಗೆ ಬಂದಿದ್ದು ವಿಚಾರಣೆ ಆಗಬೇಕಾಗಿದೆ.

ಇ) ವಿಚಾರಣಾ ಹಂತದಲ್ಲಿರುವುದರಿಂದ ಯಾವುದೇ ಕ್ರಮ ಕೈಗೊಳ್ಳಲಾಗುವುದಿಲ್ಲ.

ಈ) ಕೈಗೊಂಡಿದೆ.

ಸರ್ಕಾರದಿಂದ ಸಹಕಾರ ಸಂಘಗಳಿಗೆ ನೀಡಲಾದ ಉತ್ಪಾದನಾ ಉತ್ತೇಜಕರ ಮೊತ್ತ.

981 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದಿಂದ ಸಹಕಾರ ಸಂಘಗಳಿಗೆ ನೀಡಲಾದ ಉತ್ಪಾದನಾ ಉತ್ತೇಜಕರ ಮೊತ್ತವೆಷ್ಟು?

ಆ) ಸರ್ಕಾರವು ಈ ಮೊತ್ತವನ್ನು ಪೂರ್ಣವಾಗಿ ಬಿಡುಗಡೆ ಮಾಡಿದೆಯೆ?

ಇ) ಇಲ್ಲದಿದ್ದರೆ ಬಿಡುಗಡೆ ಮಾಡಲು ಬಾಕಿ ಇರುವ ಮೊತ್ತವೆಷ್ಟು ಮತ್ತು ಎಂದು ಸಂಪೂರ್ಣವಾಗಿ ಪಾವತಿಸಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ರೂ. 27.74 ಕೋಟಿ.

ಆ) ಇಲ್ಲ.

ಇ) ಸರ್ಕಾರ ಇನ್ನೂ ರೂ. 10.00 ಗಳನ್ನು ಈ ಬಾಬಿಗೆ ಬಿಡುಗಡೆ ಮಾಡಬೇಕಾಗಿರುತ್ತದೆ. ಈ ಮೊತ್ತವನ್ನು ಸರ್ಕಾರ ಸದ್ಯದಲ್ಲಿಯೇ ಬಿಡುಗಡೆ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ನೆರೆ ಹಾವಳಿಗೀಡಾದ ಪ್ರದೇಶಗಳಲ್ಲಿ ಸಾಲ ವಸೂಲಾತಿಗೆ ಕ್ರಮ.

950 - ಶ್ರೀ ಕೆ. ಹರ್ಷಕುಮಾರ ಗೌಡ, (ಚಾಮರಾಜ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ನೆರೆ ಹಾವಳಿಗೀಡಾದ ಪ್ರದೇಶದಲ್ಲಿ ಸಾಲ ವಸೂಲಿ ಮಾಡುವ ನಿಟ್ಟಿನಲ್ಲಿ ಸರ್ಕಾರವು ಅನುಸರಿಸುತ್ತಿರುವ ಕ್ರಮವೇನು?

ಆ) ನೆರೆ ಹಾವಳಿಯಿಂದ ಸಾಲ ಪಡೆದ ರೈತರು ನಷ್ಟಕ್ಕೊಳಗಾಗಿರುವುದರಿಂದ ಸರ್ಕಾರದವರು ಅಂತಹವರಿಗೆ ನೀಡುವ ರಿಯಾಯಿತಿಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ಅಂತಹ ಪ್ರದೇಶದಲ್ಲಿನ ರೈತರ ಸಹಕಾರ ಸಂಘಗಳಿಂದ ಪಡೆದುಕೊಂಡಂತಹ ಅಲ್ಪಾವಧಿ ಬೆಳೆ ಸಾಲಗಳನ್ನು ನಬಾರ್ಡ್ ಭಾರತೀಯ ರಿಜರ್ವ್ ಬ್ಯಾಂಕು ವಿಧಿಸಿರುವ ಷರತ್ತುಗಳನ್ವಯಿಸಿ ಮಧ್ಯಮಾವಧಿ ಸಾಲಗಳನ್ನಾಗಿ ಪರಿವರ್ತಿಸಲಾಗುವುದು.